**ಸಾಕ್ಷಿಯನ್ನು ದಿನಾಂಕಃ 11-02-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಶ್ರೀ.ಎಸ್.ಜಿ.ಟಿ ವಕೀಲರವರಿಂದಃ**

1. ನಾನು ಸುಣಗೇರಿಯಲ್ಲಿ ವಾಸ ಇದ್ದೇನೆ ಅಂದರೆ ಸರಿ. ದಾವಾ ಅಸ್ತಿಯಲ್ಲಿ 4 ಮನೆಗಳು ಇವೆ ಅಂದರೆ ಸರಿ. ಕೆಂಚಮ್ಮನ ಮನೆಯ ಪೂರ್ವಕ್ಕೆ ರಂಗಾರಿಯವರ 2 ಮನೆಗಳು ಇವೆ ಅಂದರೆ ಸರಿ. ರಂಗಾರಿ ಇವರ ಮನೆಗಳಿಗೆ ಹೊಂದಿಕೊಂಡು ಬಯಲು ಜಾಗ ಮತ್ತು ಮನೆ ಇವೆ ಅಂದರ ಸರಿ. ಸದರಿ ಬಯಲು ಜಾಗ ಮತ್ತು ಮನೆ ರಂಗಾರಿ ಇವರ ಮನೆಯ ದಕ್ಷಿಣಕ್ಕೆ ಬರುತ್ತವೆ ಅಂದರೆ ಸರಿ. ವಾದಿಯ ತಂದೆ ಸಿದ್ದಪ್ಪ ದಾವಾ ಅಸ್ತಿಯನ್ನು ಖರೀದಿ ಮಾಡಿದ್ದನು ಎಂದು ನಾನು ಖರೀದಿ ಪತ್ರ ನೋಡಿದ ಕಾರಣ ಹೇಳುತ್ತಿದ್ದೇನೆ. ಆ ಖರೀದಿ ಪತ್ರ ನನಗೆ ಕೆಂಚಮ್ಮ ತೋರಿಸಿರುವರು. ನನಗೆ ಬೀಮಪ್ಪ ತಂದೆ ತುಂಬಪ್ಪ ಇವರ ಪರಿಚಯ ಇರುವುದಿಲ್ಲ. ಪೂರ್ವ ಪಶ್ಚಿಮ 9 ಅಡಿ ಮತ್ತು ಉತ್ತರ ದಕ್ಷಿಣ 15 ಅಡಿ ಎಂದು ಸಾಕ್ಷಿ ಪ್ರಮಾಣ ಪತ್ರದಲ್ಲಿ ಸುಳ್ಳಾಗಿ ಬರೆಸಿದ್ದೇನೆ ಅಂದರೆ ಸರಿಯಲ್ಲ.

2. ದಾವಾ ಅಸ್ತಿ ಕೆಂಚಮ್ಮಳ ತಂದೆ ಸಿದ್ದಪ್ಪ ಖರೀದಿ ಮಾಡಿದ ಅಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸಿದ್ದಪ್ಪನಿಗೆ ಕೆಂಚಮ್ಮ ಒಬ್ಬಳೇ ಮಗಳು ಅಂದರೆ ಸರಿ. ಸಿದ್ದಪ್ಪನಿಗೆ ಕೆಂಚಮ್ಮಳನ್ನು ಹೊರತು ಪಡಿಸಿ ಬೇರೆ ವಾರಸುದಾರರು ಇರುವುದಿಲ್ಲ ಅಂದರೆ ಸರಿ. ಸವಿತಾ ಯಾವ ಅಸ್ತಿಯನ್ನು ಖರೀದಿ ಮಾಡಿರುವರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಸೇರಿದ ಡೋರ ನಂ 280 ಮತ್ತು ದಾವಾ ಅಸ್ತಿ ಇವುಗಳು ಬೇರೆ ಬೇರೆ ಆಗಿರುತ್ತವೆ ಅಂದರೆ ನನಗೆ ಗೊತ್ತಿಲ್ಲ. ನನಗೆ ರಂಗಾರಿ ಇವರ

ಮನೆಗಳ ಡೋರ ನಂಬರು ಬೇರೆ ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ. ದಾವಾ ಅಸ್ತಿಯಲ್ಲಿ ಇರುವ ಎಲ್ಲಾ ಮನೆಗಳು ಒಂದಕೊಂದು ಹೊಂದಿಕೊಂಡು ಒಂದೇ ಉದುಗಿನ ಗೊಡೆಯಿಂದ ನಿರ್ಮಿಸಲ್ಪಟ್ಟಿವೆ ಅಂದರೆ ಸರಿ. ವಾದಿ ಕೆಂಚಮ್ಮ ಪ್ರತಿವಾದಿಯ ಡೋರ ನಂಬರಿಗೆ ವಾರಸುದಾರ ಅಲ್ಲ ಅಂದರೆ ನನಗೆ ಗೊತ್ತಿಲ್ಲ. ಆದಾರ ರಹಿತವಾಗಿ ಕೆಂಚಮ್ಮನ ಮಾತನ್ನು ಕೇಳಿಕೊಂಡು ವಿಸ್ತೀರ್ಣವನ್ನು ಪ್ರಮಾಣ ಪತರದಲ್ಲಿ ಕಾಣಿಸಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

11-02-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ**